## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**ಸಿ. ಸಿ. ನಂ.35/2022**

| | | | |
|---|---|---|---|
| ಸಾಕ್ಷಿಧಾರರ ಹೆಸರು | : ಸಯ್ಯದ ಶಿರಹಟ್ಟಿ | ಪಿಡಬ್ಲ್ಯೂ | **1** |
| ತಂದೆ:ಗಂಡನ ಹೆಸರು | : ಮಹ್ಮದಅಲಿ | ಸಿಡಬ್ಲ್ಯೂ | **1** |
| ವಯಸ್ಸು | : 27 ವರ್ಷ | | |
| ಉದ್ಯೋಗ | : ಆಟೋ ಚಾಲಕ | | |
| ವಾಸಸ್ಥಳ | : ಹುಬ್ಬಳ್ಳಿ | | |

ದಿನಾಂಕ **04-01-2023** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿಲ್ಲ. ಆರೋಪಿ ನನ್ನ ಆಟೋ ರಿಕ್ಷಾದಲ್ಲಿ ಯಾವತ್ತೂ ಬಾಡಿಗೆ ತರೀಕ ಪ್ರಯಾಣಿಸಿಲ್ಲ. ನಾನು ಆರೋಪಿಯ ಬಳಿ ಬಾಡಿಗೆ ಹಣ ಕೇಳಿದಾಗ ಹಣ ಕೊಡದೇ ನನ್ನ ಮೇಲೆ ಹಲ್ಲೆ ಮಾಡಿಲ್ಲ. ಆರೋಪಿ ನನಗೆ ಸೇರಿದ ಆಟೋ ರಿಕ್ಷಾವನ್ನು ಸುಲಿಗೆ ಮಾಡಿಕೊಂಡು ಹೋಗಿಲ್ಲ. ನಾನು ಈ ಬಗ್ಗೆ ಯಾವುದೇ ದೂರನ್ನು ನೀಡಿಲ್ಲ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ದೂರನ್ನು ನಿ ಪಿ **1** ಎಂದು, ಸಾಕ್ಷಿಯ ಸಹಿಯನ್ನು ನಿ ಪಿ **1**(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಪುನಃ ಹೇಳಿಕೆ ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ. ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ನಿ ಪಿ **2** ಎಂದು, ಸಾಕ್ಷಿಯ ಸಹಿಯನ್ನು ನಿ ಪಿ **2**(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನಿದ್ದೇನೆ. ಅದನ್ನು ನಿ ಪಿ **3** ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಹಾತ ನಕಾಶೆಯಲ್ಲಿ ನನ್ನ ಸಹಿ ಇದೆ, ಅದನ್ನು ನಿ ಪಿ **4** ಎಂದು, ಸಾಕ್ಷಿಯ ಸಹಿಯನ್ನು ನಿ ಪಿ **4**(ಎ) ಎಂದು ಗುರುತಿಸಲಾಯಿತು. ನಿ ಪಿ **3** ಮತ್ತು **4** ನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ಮತ್ತು ತಯಾರಿಸಲಾಗಿದೆ ಎಂದು ಗೊತ್ತಿಲ್ಲ. ಇನ್ನೊಂದು ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ **5** ಎಂದು, ಅದರಲ್ಲಿರುವ ಸಹಿಯನ್ನು ನಿ ಪಿ **5**(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ. ಈಗ ನೋಡ್ತುರುವ **5** ಭಾವಚಿತ್ರ ಗಳು ನನ್ನ ಆಟೋದ್ದಾಗಿದೆ

ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ಎಂದು ಗೊತ್ತಿಲ್ಲ. ಆ ಭಾವಚಿತ್ರಗಳನ್ನು ನಿ ಪಿ **6** ರಿಂದ **10** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ **17-7-2021** ರಂದು ಸಂಜ **6** ಗಂಟೆಗೆ ನಾನು ಹಾನಗಲ್ ಪಟ್ಟಣದ ಶ್ರೀ. ರೇಣುಕಾ ಡಾಬಾ ಎದುರಿನ ತಡಸ ಗಂಗಾಮೂಲ ಟಾರ್ ರಸ್ತೆಯ ತಡಸಗೆ ಹೋಗುವ ಕಡೆ ನನಗೆ ಸೇರಿದ ಕೆ ಎ **25/** ಎಎ **2310** ರಲ್ಲಿ ಇದ್ದಾಗ ಆರೋಪಿಯು ಬಂದು ನನ್ನ ಆಟೋ ರಿಕ್ಷಾವನ್ನು ಬಾಡಿಗೆಗೆ ತೆಗೆದುಕೊಂಡು ಹುಬ್ಬಳ್ಳಿ ಹಳೆ ಬಸ್ ನಿಲ್ದಾಣದಿಂದ ರಾತ್ರಿ **9** ಗಂಟೆಗೆ ಹಾನಗಲ್‌ಗೆ ಬಂದು ಆಟೋ ನಿಲ್ಲಿಸಲು ಕೇಳಿದ ಎಂದರೆ ಸರಿಯಲ್ಲ. ನಾನು ಆಟೋ ನಿಲ್ಲಿಸಿ ಆರೋಪಿಯ ಬಳಿ ಬಾಡಿಗೆಯ ಹಣ ಕೇಳಿದಾಗ ಆರೋಪಿ ಹಣ ಕೊಡದೇ ಕೈಯಿಂದ ನನ್ನ ಕಪಾಳಕ್ಕೆ ಹೊಡೆದು ನನ್ನ ಹುಬ್ಬಿನ ಹತ್ತಿರ ಆತನ ತಲೆಯಿಂದ ಡಿಚ್ಚಿ ಕೊಟ್ಟು ನೋವುಂಟು ಮಾಡಿದ ಎಂದರೆ ಸರಿಯಲ್ಲ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದ ಎಂದರೆ ಸರಿಯಲ್ಲ. ಆರೋಪಿ ನನ್ನ ರಿಕ್ಷಾದ ಕೀಲಿಯನ್ನು ಕಸಿದುಕೊಂಡು ನನ್ನನ್ನು ನೆಲಕ್ಕೆ ದೂಡಿ ರೂ.**1,00,000-00** ಬೆಲೆಯ ನನ್ನ ಆಟೋ ರಿಕ್ಷಾವನ್ನು ಚಾಲೂ ಮಾಡಿಕೊಂಡು ಸುಲಿಗೆ ಮಾಡಿಕೊಂಡು ಹೋದ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿ ಪಿ **1** ರ ದೂರನ್ನು ಮತ್ತು ಈಗ ಓದಿ ಹೇಳಿದಂತೆ ಮರುಹೇಳಿಕೆಯನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಮರುಹೇಳಿಕೆಯನ್ನು ನಿ ಪಿ **11** ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ದಿನಾಂಕ **30-7-2021** ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಚಾ ಸಾ **2** ಮತ್ತು **3** ರವರ ಸಮಕ್ಷಮ ಮಧ್ಯಾಹ್ನ **2** ರಿಂದ **3** ಗಂಟೆಯವರೆಗೆ ನಿ ಪಿ **2** ರ ಮಹಜರ ಮಾಡಿ ನಿ ಪಿ **3** ರ ಭಾವಚಿತ್ರ ತೆಗೆದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿ ಪಿ **4** ರ ಕಚ್ಚಾನಕಾಶೆಯನ್ನು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ನಂತರ ನಾನು ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ **30-7-2021** ರಂದು ಪೊಲೀಸ್ ಠಾಣೆಯಿಂದ ನನ್ನ ಆಟೋವನ್ನು ಮಧ್ಯಾಹ್ನ **1** ರಿಂದ **1-30** ರವರೆಗೆ ಚಾ ಸಾ **6** ಮತ್ತು **7** ರವರಸ ಮಕ್ಷಮ ಮಹಜರಿನ ಮೂಲಕ ವಶಕ್ಕೆ ಪಡೆದುಕೊಂಡೆ

ಎಂದರೆ ಸರಿ. ಆ ಕಾಲಕ್ಕೆ ನಿ ಪಿ 6 ರಿಂದ 10 ರ ಭಾವಚಿತ್ರ ಗಳನ್ನು ತೆಗೆಯಲಾಗಿದೆ ಎಂದರೆ ಸರಿ. ನನಗೆ ನಿ ಪಿ 1 ರಿಂದ 4 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ, ಆರೋಪಿಯನ್ನು ನೋಡಿ ಗುರುತಿಸಲು ಆಗುತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರು ಈ ಸಾಕ್ಷಿಧಾರರ ಪಾಟೀ ಸವಾಲು ಏನೂ ಇಲ್ಲ ಅಂತಾ ನಿವೇದಿಸಿಕೊಂಡಿರುತ್ತಾರೆ )**

: ಮರುವಿಚಾರಣೆ : ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್